ಇಂದು ದಿಃ 04.12.2024 ರಂದು ಸಾಕ್ಷಿಯನ್ನು ಕರೆಯಿಸಲಾಯಿತು. ಪ್ರಮಾಣ ವಚನ ಬೋದಿಸಲಾಯಿತು.

ಮುಂದುವರಿದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಡಿ ವಿ ಜಿ ವಕೀಲರಿಂದಃ

ರಾಜಶೇಖರ ಮತ್ತು ಅವರ ಮಗ ರೂ. 3 ಲಕ್ಷಕ್ಕೆ ಭೋಗ್ಯಕ್ಕೆ ಕೊಟ್ಟಿದ್ದರು ಎನ್ನುವ ಬಗಗೆ ದಾಖಲೆ ಹಾಜರು ಮಾಡಲು ನನಗೆ ತೊಂದರೆ ಇದೆಯಾ ಎಂದರೆ ನನಗೆ ಗೊತ್ತಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ಪ್ರಮಾಣಪತ್ರದಲ್ಲಿ ಏನು ಬರೆದಿದೆ ಎಂದರೆ ನನಗೆ ಗೊತ್ತಿಲ್ಲ. ದಿಃ09.05.2015 ಮತ್ತು 06.05.2015 ರಂದು ವಾದಿಯು ಡಿ ಪಿ ನೋಟ್ ಅನ್ನು ಬರೆದುಕೊಟ್ಟು 1.25 ಲಕ್ಷ ಹಣ ಪಡೆದುಕೊಂಡು ಅದರಲ್ಲಿ ತಮ್ಮ ಸಹಿ ಮತ್ತು ಹೆಬ್ಬೆಟ್ಟು ಹಾಕಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಡಿ ಚಿ ನೋಟ್ ನಲ್ಲಿ ಇರುವ ತಮ್ಮ ಸಹಿಯನ್ನು ನ್ಯಾಯಾಲಯಕ್ಕೆ ಬಂದು ಗುರುತಿಸಲು ತೊಂದರೆ ಇದೆಯಾ ಎಂದರೆ ವಾದಿಗೆ ಅನಾರೋಗ್ಯ ಇರುವ ಕಾರಣ ಅವರಿಗೆ ಬರಲು ತೊಂದರೆ ಆಗುತ್ತದೆ ಎಂದು ಸಾಕ್ಷಿ ನುಡಿಯುತ್ತಾರೆ. ವಾದಿಗೆ ಹುಷಾರಿಲ್ಲ ಎನ್ನುವ ಬಗ್ಗೆ ದಾಖಲೆ ಹಾಜರು ಮಾಡಿಲ್ಲ ಆದರೆ ಅವರಿಗೆ ಬಿ ಪಿ ಮತ್ತು ಸಕ್ಕರೆ ಖಾಯಿಲೆ ಇದೆ. ಹೊರಗಡೆ ಹೋಗಬಾರದು ವಿಶ್ರಾಂತಿಯಲ್ಲಿರಬೇಕು ಎಂದು ವೈದ್ಯರು ಹೇಳಿದ ಬಗ್ಗೆ ದಾಖಲೆ ಇಲ್ಲ.

ವಾದಿಗೆ ಈ ದಾವೆ ಸಲ್ಲಿಸಲು ಇಷ್ಟವಿಲ್ಲದಿದ್ದರೂ ಸಹ ನಾನೇ 2 ನೇ ಪ್ರತಿವಾದಿ ಮತ್ತು ವಾದಿಯ ನಡುವೆ ವೈಮನಸ್ಸು ತರಲು ಮತ್ತು ದಾವಾ ಆಸ್ತಿ ಲಪಟಾಯಿಸಲು ಈ ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. 18 ವರ್ಷ ನಾನು ವಾದಿಯನ್ನು ಸಾಕಿದ್ದೇನೆ ಎಂಬ ಬಗ್ಗೆ ದಾಖಲೆ ಇದೆಯಾ ಎಂದರೆ ಅವಳು ನಮ್ಮ ಮನೆಯಲ್ಲಿ ಇದ್ದದ್ದೆ ದಾಖಲೆ ಎಂದು ಸಾಕ್ಷಿ ನುಡಿಯುತ್ತಾರೆ. ವಾದಿಯ ಮದುವೆಯನ್ನು ಸಂಪೂರ್ಣವಾಗಿ 2 ನೇ ಪ್ರತಿವಾದಿ ನಿಂತು ಮಾಡಿರುತ್ತಾರೆ ಎಂದರೆ ಅವರು ಯಾವುದೇ ಜವಾಬ್ದಾರಿ ತೆಗೆದುಕೊಂಡಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ವಾದಿಯ ಮದುವೆ ಸರಗೂರಿನಲ್ಲಿ ಹುಡುಗನ ಮನೆಯವರೇ ಮದುವೆ ಮಾಡಿಕೊಂಡರು. 2 ನೇ ದಾವಾ ಸ್ವತ್ತು ದೇವಮ್ಮಣ್ಣಿಗೆ ಆಸ್ತಿ ಹೇಗೆ ಬಂತು ಎಂದರೆ ವಾದಿಯ ತಾಯಿಯೇ ಖರೀದಿಸಿದರು ಎಂದು ಸಾಕ್ಷಿ ನುಡಿಯುತ್ತಾರೆ. ಮಂಜುಳಾ ರವರು 2 ನೇ ಪ್ರತಿವಾದಿಯನ್ನು ಮದುವೆ ಆದ ನಂತರ ಖರೀದಿಸಿದ್ದರು. ಮದುವೆ ಆಗಿ 5-6 ವರ್ಷಗಳ ನಂತರ ಅದನ್ನು ಖರೀದಿ ಮಾಡಿದ್ದರು. ಮಂಜುಳಾ ರವರು ಮನೆಕೆಲಸ ಮಾಡುತ್ತಿದ್ದರು ಮತ್ತು ಜಮೀನಿಗೆ ಹೋಗಿ ಬರುತ್ತಿದ್ದರು. 2 ನೇ ಆಸ್ತಿಯನ್ನು ಖರೀದಿಸಲು 2 ನೇ ಪ್ರತಿವಾದಿ ಸಹಕರಿಸಿದ್ದರು ಎಂದರೆ ಸರಿಯಲ್ಲ. 2 ನೆ ಪ್ರತಿವಾದಿ ಹೆಸರಿನಲ್ಲಿ ಆರ್ ಟಿ ಸಿ ಇಲ್ಲದ ಕಾರಣ ಕಾನೂನು ತೊಡಕಾಗಿದ್ದು 2 ನೇ ಪ್ರತಿವಾದಿ ಹಣ ತೊಡಗಿಸಿ ತಮ್ಮ ಹೆಂಡತಿ ಹೆಸರಿಗೆ ಖರೀದಿಸಿದ್ದರು ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ಮತ್ತು ವಾದಿಯ ತಂದೆ ರಾಜಶೇಖರ ಅಂದರೆ 2 ನೇ ಪ್ರತಿವಾದಿ.

2 ನೇ ಅನುಕ್ರಮ ಆಸ್ತಿಯನ್ನು ಲಪಟಾಯಿಸಲು ಈ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 2 ನೆ ಅನುಕ್ರಮ ಆಸ್ತಿಯನ್ನು ನನ್ನ ಅತ್ತಿಗೆ ಖರೀದಿಸಿದ್ದರು. ಸಾಲವನ್ನು ಸಂಪೂರ್ಣವಾಗಿ ಮಂಜುಳಾ ರವರೆ ಪಾವತಿ ಮಾಡಿರುತ್ತಾರೆ ಎಂದು ಬಾಯಿ ಮಾತಿನ ಮೂಲಕ ಹೇಳಿರುತ್ತಾರೆ. ನಿವೇಶನ ಖರೀದಿಸಿದ ಬಗ್ಗೆ ದಾಖಲೆ ಇದ್ದು ಅದನ್ನು ನ್ಯಾಯಾಲಯಕ್ಕೆ ಹಾಜರು ಮಾಡಿದ್ದೇನೆ. ಸರ್ವೆ ನಂಬರ್ 4/1 ರ ಆಸ್ತಿ ಮಂಜುಳಾ ರವರಿಗೆ ಅವರ ತಾಯಿ ಕೊಟ್ಟಿದ್ದರು. ಅದನ್ನು ಖಾತೆ ಮೂಲಕ ಕೊಟ್ಟರು ಆದರೆ ಯಾವ ರೀತಿ ಕೊಟ್ಟರು ಎಂದು ನನಗೆ ಗೊತ್ತಿಲ್ಲ. ಮಂಜುಳಾ ರವರ ತಾಯಿ ಶಿವಮ್ಮ ಆಸ್ತಿಯನ್ನು ಯಾವ ರೀತಿ ಕೊಟ್ಟರು ಎಂಬ ಬಗ್ಗೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಮಾಡಿದ್ದೇನೆ. ಮಂಜುಳಾ ಬದುಕಿರುವಾಗ 2 ದಾವಾ ಆಸ್ತಿಗಳು ವಾದಿ ಮತ್ತು 1 ನೆ ಪ್ರತಿವಾದಿಗೆ ಹೋಗಬೇಕು ಎಂದು ಬರೆದಿದ್ದರು ಎಂದರೆ ಸರಿಯಲ್ಲ. ಅವರು ಮೃತಪಟ್ಟ ನಂತರ ವಾದಿ ಮೂಲಕ ದಾವೆ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ನಾನು ದುರ್ಲಾಭ ಪಡೆಯಲು ಆಸ್ತಿ ಲಪಟಾಯಿಸಲು ವಾದಿ ಮೂಲಕ ಈ ದಾವೆ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ವಾದಿ ಆರೋಗ್ಯವಾಗಿದ್ದರೂ ಸಹ ಅವರು ಅನಾರೋಗ್ಯದಿಂದ ಬಳಲುತ್ತಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮಂಜುಳಾ ರವರು ಜಮೀನಿಗೆ ಹೋಗಿ ಬಂದ ನಂತರ ಅವರು ಮೃತಪಟ್ಟರು ಎಂದು ಅವರ ಅಣ್ಣ ತಮ್ಮಂದಿರು ಹೇಳಿದ್ದರು. ಮೃತಪಡುವ ಮೊದಲು ಅವರು ಯಾವುದೆ ಆಸ್ಪತ್ರೆ ಗೆ ಹೋಗಿಲ್ಲ. ಮಂಜುಳಾ ರವರಿಗೆ ಕಿಡ್ನಿ ಮತ್ತು ಹೃದಯ ಸಂಬಂಧಿ ಖಾಯಿಲೆ ಇದ್ದು ಆ ಬಗ್ಗೆ ಅವರ ಗಂಡ ರಾಜಶೇಖರ ಚಿಕಿತ್ಸೆ ಕೊಡಿಸಿದ್ದರೂ ಅದು ಫಲಕಾರಿಯಾಗಿಲ್ಲ ಎಂದರೆ ಸರಿಯಲ್ಲ. ಅವರ ಆರೈಕೆಯನ್ನು ರಾಜಶೇಖರ ರವರು ಮಾಡುತ್ತಿದ್ದರು ಎಂದರೆ ಸರಿಯಲ್ಲ.

ನನ್ನ ಮತ್ತು 2 ನೇ ರಾಜಶೇಖರ ನಡುವೆ ವೈಮನಸ್ಸು ಇರಲಿಲ್ಲ ಆದರೆ ಅವನು ಇತ್ತೀಚೆಗೆ ನಮ್ಮ ಮನೆಗೆ ಬರುತ್ತಿಲ್ಲ. ರಾಖಶೇಖರ ನನ್ನ ಅಣ್ಣ. ನನ್ನ ದಾವೆಯಲ್ಲಿ ಎಲ್ಲಾ ಸುಳ್ಳು ಉಲ್ಲೇಖ ಮಾಡಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃಇಲ್ಲ.

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.
sd/-
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಎಂ.ಎ.ಸಿ.ಟಿ., ನಂಜನಗೂಡು.